ಚಿತ್ರಪಟ ಕಥನ

# ಬಂಡಿಗಳ ಧ್ಯಾನ, ಭಂಡಾರ ಮಜ್ಜನ



ಬಹುತ್ವದ ಕಡೆಗೆ

**ಸವದತ್ತಿಯ ಯಲ್ಲಮ್ಮನ ಜಾತ್ರೆ ಕರ್ನಾಟಕದ ಪ್ರಮುಖ ಜಾತ್ರೆಗಳಲ್ಲೊಂದು. ಜನವರಿ 6ರಿಂದ ಒಂದು ತಿಂಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ, ಯಲ್ಲಮ್ಮನ ದರ್ಶನಕ್ಕಾಗಿ ಪಕ್ಕದ ರಾಜ್ಯಗಳ ಭಕ್ತರೂ ಆಗಮಿಸುತ್ತಾರೆ. ಯಲ್ಲಮ್ಮನ ಜಾತ್ರೆ, ಭಕ್ತಿ–ಭಾವುಕತೆಯನ್ನಷ್ಟೇ ಅನಾವರಣಗೊಳಿಸುವುದಿಲ್ಲ; ಬಹುತ್ವ ಭಾರತದ ಚೆಲುವೂ ಜಾತ್ರೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ.**

■ **ಪ್ರಕಾಶ ಕಂದಕೂರ**

ಉತ್ತರ ಕರ್ನಾಟಕ ಭಾಗದಲ್ಲಿ ಜಾತ್ರೆಗಳಿಗೆ ಮಹತ್ವದ ಸ್ಥಾನವಿದೆ. ಜಾತ್ರೆಗಳೆಂದರೆ ಇಲ್ಲಿನ ಜನರಿಗೆ ಹಬ್ಬ. ಪ್ರಾದೇಶಿಕ ಅಸ್ಮಿತೆ, ಸಂಬಂಧ, ಬಾಂಧವ್ಯ, ವಿರಾಮ, ಭಕ್ತಿ, ಸಾಮರಸ್ಯ, ವಿನಿಮಯ – ಇನ್ನೂ ಏನೆಲ್ಲದರ ಸಂಗಮದ ರೂಪದಲ್ಲಿ ಜಾತ್ರೆಗಳನ್ನು ನೋಡಬಹುದು. ಜೀವನದ ಅವಿಭಾಜ್ಯ ಅಂಗವಾಗಿ ಈ ಜಾತ್ರೆಗಳು ಇಲ್ಲಿನ ಜನರ ಬದುಕಲ್ಲಿ ಬೇರೂರಿವೆ. ಕೆಲವು ಜಾತ್ರೆ ತಿಂಗಳಾನುಗಟ್ಟಲೆ ನಡೆಯುತ್ತವೆ ಎನ್ನುವುದು ಇಲ್ಲಿನ ಜನರ ಜಾತ್ರಾಪ್ರೀತಿಗೆ ಸಾಕ್ಷಿ.

ಜಾತ್ರೆಗಳು ಸ್ಥಳೀಯವಾಗಿ ಸಾಕಷ್ಟು ಮಹತ್ವ ಪಡೆದುಕೊಂಡಿರುತ್ತವೆ. ಇವುಗಳ ನಡುವೆ ದೂರದ ಪ್ರದೇಶಗಳಿಂದ ಜನರು ಬಂದು ಆಚರಿಸುವ ಜಾತ್ರೆಗಳು ವಿಭಿನ್ನವಾಗಿ ನಿಲ್ಲುತ್ತವೆ. ಅಂತಹ ವಿಭಿನ್ನ, ವಿಶಿಷ್ಟ ಜಾತ್ರೆಗಳಲ್ಲೊಂದು, ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ನಡೆಯುವ ಯಲ್ಲಮ್ಮನ ಜಾತ್ರೆ. ಸ್ಥಳೀಯ ಭಕ್ತರಿಗಿಂತ ವಿವಿಧ ರಾಜ್ಯಗಳ ಭಕ್ತರು ಈ ಜಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಪ್ರತಿವರ್ಷ ಜನವರಿ ತಿಂಗಳಲ್ಲಿ ಬರುವ ‘ಬನದ ಹುಣ್ಣಿಮೆ’ಯಿಂದ ಹಿಡಿದು, ಫೆಬ್ರುವರಿ ತಿಂಗಳಲ್ಲಿ ಬರುವ ‘ಭಾರತ

